ಹೇಳಿ ನಡೆದು ಬಿಡಬೇಕೆಂದುಕೊಂಡಿದ್ದಳು. ಆಗಿರಲಿಲ್ಲ. ತಾನಿಲ್ಲಿ ಬಂದು ಇಲ್ಲಿ ಕೂತಾಗಿನಿಂದ ತಲೆ ಓಡದೇ ನಿಂತಂತಾಗಿತ್ತು. ಗಂಟಲು ಕಟ್ಟಿತ್ತು. ಎದೆ ನಿಲ್ಲದೆ ಹೊಡೆದುಕೊಳ್ಳುತ್ತಿತ್ತು. ಪರಿಸ್ಥಿತಿಯೂ ವಿಕೋಪಕ್ಕೆ ಹೋಗಿದೆ.. ಏನೋ ಆಗಿಬಿಡುತ್ತದೆ.. ಈ ಕ್ಷಣ ಅದನ್ನು ಹೇಳದಿದ್ದರೆ, ಹೇಳಿ ಮನವರಿಕೆ ಮಾಡಿ ನಿಲ್ಲಿಸದಿದ್ದರೆ ದೊಡ್ಡ ಪ್ರಮಾದ ಘಟಿಸಿಹೋಗುತ್ತದೆನ್ನುವ ತರಹದ ಭೀಕರ ಚಡಪಡಿಕೆಗೆ ಮೊದಲ ಬಾರಿ ತುತ್ತಾಗಿದ್ದಳು ಕತ್ಲೆಕಾನಿನ ವೈಶಾಲಿ ಪುಟ್ಟಿ.

ಪೇಟೆಯಿಂದ ಹತ್ತು ಕಿಲೋಮೀಟರ್‌ಗೆ ಕತ್ಲೆಕಾನು ಕತ್ರಿ. ಕತ್ರಿಯಿಂದ ಎರಡು ಕಿಲೋಮೀಟರ್ ಹೆಗ್ಗಾನಿನ ಮಾರ್ಗದಲ್ಲಿ ಈ ಕತ್ಲೆಕಾನಿನ ಭಟ್ಟರ ಹೆಗಡೆಯವರ ಮನೆಗಳಿರುವ ಜಾಗ. ಇಲ್ಲಿಂದ ಇನ್ನೂ ಮುಂದಕ್ಕೆ ಒಂದೂವರೆ ಕಿಲೋಮೀಟರ್ ದೂರದಲ್ಲಿನ ಹತ್ತಾರು ಮನೆಗಳ ಜಾಗದಲ್ಲಿ ನಾಮಧಾರಿ, ಮರಾಠಿ, ಕೊಂಕಣಿ ಮನೆಗಳು. ಅದರಾಚೆ ಸಿರ್ಸಿ ದಾರಿಗೆ ಸಮೀಪವಾಗಿ ಸಿದ್ದಿಗಳ ಹಟ್ಟಿ.

ಸುಮ್ಮನಿದ್ದರೂ ತಲೆಯೊಳಗೆ ಏನೋ ಎಣಿಕೆ ಶುರುವಾಗಿಬಿಡುವ ಪುಟ್ಟಿಗೆ ತಾನು ಬಂದ ವೇಗಕ್ಕೂ ಇಲ್ಲಿನ ಶೂನ್ಯ ಪ್ರತಿಕ್ರಿಯೆಗೂ ಕಳವಳ ಶುರುವಾಗಿತ್ತು. ಮೂರು ನಾಲ್ಕು ತಿಂಗಳಿಗೊಮ್ಮೆ ವಿಶೇಷ ಕಾರಣಕ್ಕೆ ಪೇಟೆಗೆ ಹೋಗುವಾಗ ಇದೇ ಮಾರ್ಗವಾಗಿ ನಡೆದು, ಇದೇ ಭಟ್ಟರ ಮನೆ ದಿಟ್ಟಿಸುತ್ತ ದಾಟಿ, ನೀರಿನ ಬೆಲಗು, ಸಂಕ ದಾಟಿ ನಡೆದು ಕತ್ರಿ ಮುಟ್ಟಿ ಬಸ್ಸಿಗಾಗಿ ನಿಲ್ಲುವುದಾಗಿತ್ತು. ಮನೆ ಬಿಟ್ಟಾಗಿನಿಂದ ಮಾತನಾಡುತ್ತ ಬರುತ್ತಿದ್ದ ಅಪ್ಪ ಅಮ್ಮ ಮತ್ತು ಪುಟ್ಟಿ ಈ ಮನೆ ಸಮೀಪಿಸುತ್ತಿದ್ದಂತೆ ಮೌನವಾಗಿ ನಡೆ ನಿಧಾನವಾಗಿಬಿಡುತ್ತಿದ್ದ ಬಗ್ಗೆ ಬಹಳಷ್ಟು ಯೋಚಿಸುತ್ತಿದ್ದವಳು ಈಗ ಇಲ್ಲಿಗೇ ಬಂದದ್ದಲ್ಲದೆ ಕೆಮ್ಮಿ ಕೂಗಿ ಕರೆಯದೆ ದಣಪೆ ಸರಗೋಲು ಸರಿಸಿ, ಮೆಟ್ಟಿಲೇರಿ ಬಾಗಿಲು ಬಡಿದು, ಒಳಗೆ ಹೆಜ್ಜೆಯಿರಿಸಿ, ಹಳೆಯ ಮರದ ಕುರ್ಚಿಯ ಮೇಲೆ ಕೂತು ಬಿಟ್ಟಿದ್ದಳು.

ಸಾಮಾನ್ಯ ಆರನೆಯ ತರಗತಿಯ ವೈಶಾಲಿಯಾಗಿದ್ದರೆ ಕಿರುಪರೀಕ್ಷೆಗೋ ಶಿಕ್ಷಕರು ಕೊಟ್ಟ ಮನೆಗೆಲಸಕ್ಕೋ ಓದಿಕೊಳ್ಳುತ್ತ ಕೂತಿದ್ದರೆ, ತನ್ನ ಮನೆ ಸುತ್ತ ಹೂವು ಚಿಟ್ಟೆಗಳ ನೋಡುತ್ತ ರಸ್ತೆಯ ಮೇಲೆ ಓಡಾಡುವವರ ನೋಡುತ್ತಿದ್ದರೆ, ಅಪ್ಪ ಅಮ್ಮನ ಜೊತೆ ಕೂತಿದ್ದರೆ ಹೀಗೆ ಮನೆಗೆ ನುಗ್ಗಿ ಕೂರುವ ಧೈರ್ಯ ಬರುತ್ತಿರಲಿಲ್ಲ. ಕಲ್ಪನೆಯಲ್ಲೂ ಕನಸಿನಲ್ಲೂ ಇದು ಸಾಧ್ಯವಿರಲಿಲ್ಲ. ಅದಕ್ಕೊಂದು ಒತ್ತಿಕೊಂಡು ಬರುವಂತಹ ಬಲವಾದ ಕಾರಣವಿತ್ತು. ಆಘಾತವಾಗುವಂತಹ ಆಗಾಧವಾದ ತುರ್ತು ಇತ್ತು.

ಬಂದಿದ್ದಾಗಿತ್ತು, ಕೂತುಬಿಟ್ಟದ್ದೂ ಆಗಿತ್ತು... ಈಗ ವಿಷಯ ಹೇಳಿ ಇವರನ್ನು ತನಗಿಂತ ಹತ್ತುಪಟ್ಟು ವೇಗದಲ್ಲಿ ಆ ಘಟನೆಯ ಜಾಗಕ್ಕೆ ಓಡಿಸಬೇಕಾಗಿದೆ ಎಂದುಕೊಂಡವಳಿಗೆ ಉಸಿರು ತಿರುಗಲು ಬಹಳ ಹೊತ್ತು ಹಿಡಿದುಬಿಟ್ಟಿತ್ತು. ಬಾಯಿ ತೆರೆದರೆ ಕೊಸ ಕೊಸ ಸದ್ದು.. ಅದೇ ವೈಶಾಲಿ ಪುಟ್ಟಿಯೊಳಗೆ ಇನ್ನಷ್ಟು ಹೆದರಿಕೆಯ ಚಡಪಡಿಕೆಯನ್ನು ಹುಟ್ಟುಹಾಕಿತ್ತು. ಇಲ್ಲೇ ಎಲ್ಲೋ ಆಡುತ್ತ ಬಂದ ಹುಡುಗಿಗೆ ಆಸರೆಯಾಗಿರಬೇಕು, ಕಾಡುಪ್ರಾಣಿ ಸದ್ದಿಗೆ ಹೆದರಿರಬೇಕು, ಹಳ್ಳದ ಕಡೆಗೆ ಒಬ್ಬಳೇ ಹೋಗಿ ಹೆದರಿರಬೇಕು. ಅದಕ್ಕೆ ಎಂದೂ ಬಾರದವಳು ಬಾಗಿಲು ಬಡಿದು ಮಾತು ಹೊರಡದಂತೆ ನಿಂತುಬಿಟ್ಟಿದ್ದಾಳೆ ಎಂಬಂತಾಗಿ ಹೋಗಿತ್ತು.

ಬಾಗಿಲು ತೆರೆದವರು ಏದುಸಿರಿನ ಹುಡುಗಿಯ ಕೂರಿಸಿ ಒಳಗೆ 'ಆಸರಿಗೆ' ಬೆಲ್ಲನೀರನ್ನೋ ಕಲ್ಲುಸಕ್ಕರೆಯನ್ನೋ ತರಲು ಹೋಗಿ, ಅಸಹಾಯಕ ಪರಿಸ್ಥಿತಿ ಸೃಷ್ಟಿಯಾಗಿತ್ತು. ಚಳಿಗಾಲದ ಬೆಳಗಿನ ವಾತಾವರಣದಲ್ಲಿ ಬೆವರಿನಲ್ಲಿ ಆತಂಕದಲ್ಲಿ ಸಣ್ಣ ಅವಮಾನದಲ್ಲಿ ಕೂತು ಬಿಟ್ಟಿದ್ದ ಪುಟ್ಟಿಗೆ ಬಹುಮುಖ್ಯ ಮೂವತ್ತೇಳು ನಿಮಿಷಗಳು ದಾಟಿದ್ದು ಸಂಕಟಕ್ಕಿಟ್ಟುಕೊಂಡಿತು. ತಟ್ಟಿ ಕೂಗಿ ಕರೆದ ಸುದೀರ್ಘ ಐದು ನಿಮಿಷದ ನಂತರ ಬಾಗಿಲು ತೆರೆದವರು ಈ ಮನೆಯ ಹಿರಿತಲೆ ರಾಜೇಶ್ವರಿಯಮ್ಮ. ತನ್ನ ಅಜ್ಜಿಯ ಪ್ರಾಯದ ಆದರೆ ಅಜ್ಜಿ ಎಂದು ಕರೆಯಲಾಗದ ಈ ಮನೆಯ ಒಡತಿ ಮಾತೊಂದನ್ನೂ ಆಡದೇ ಎಡಬಲ ಹೊಯ್ದಾಡುವಂತೆ ನಡೆದು ಕುರ್ಚಿ ತೋರಿಸಿ, 'ಬಂದೆ ಇರು' ಅನ್ನುವಂತೆ ಎಡಗೈಯಾಡಿಸಿ ಒಳಗೆ ನಡೆದೇ ಬಿಟ್ಟಿದ್ದರು. ಬಹುದೊಡ್ಡ ಬಹುಅಲಂಕೃತ ಸಾಗುವಾನಿಯ ಪ್ರಧಾನ ಬಾಗಿಲ ಚೌಕಟ್ಟನ್ನು ಹಿಡಿದು ಬಾಗಿ ಒಳನಡೆದು ಹೋದ ರಾಜೇಶ್ವರಿಯಮ್ಮನನ್ನು ಸ್ಪರ್ಶದಿಂದಾಗಲೀ ಸನ್ನೆಯಿಂದಾಗಲೀ ಮಾತಿನಿಂದಾಗಲೀ ಸದ್ದಿನಿಂದಾಗಲೀ

